ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಹೆಣ್ಣುಮಕ್ಕಳಿಗೆ ನದಿಗಳ ಹೆಸರನ್ನೇಕೆ ಇಟ್ಟಿರುತ್ತಾರೆ?



ಆ ಮಟ್ಟಕ್ಕೆ ಅವಳ ಕಣ್ಣಿಂದ ನೀರು ಹರಿಸುವ ತಾಕತ್ತು ಸಮಾಜಕ್ಕೆ ಇರುವುದರಿಂದ.

ಎಚ್.ಎಸ್. ರಾಘವೇಂದ್ರ, ಬೆಂಗಳೂರು
ಬೆಳೆದು ನಿಂತ ಮಗಳಿಗೆ ಮುಂದಿನ ದಾಂಪತ್ಯ ಜೀವನದ ಬಗ್ಗೆ ಪತ್ರ ಬರೆಯಬೇಕೆಂದಿರುವೆ. ಬರೆಯಲೆ?
ಬರೆಯಿರಿ. ನೀವು ಬಿಟ್ಟ ಅಂಶಗಳನ್ನು ಸೇರಿಸಿ ಅವಳು ಉತ್ತರಿಸುತ್ತಾಳೆ.

ರಾಜಶೇಖರ ಹಾದಿಮನಿ, ಧಾರವಾಡ
ಭ್ರಷ್ಟರಿಗೆ ನಿಮ್ಮ ಸಂದೇಶವೇನು ರಾಮ್‌ಜೀ?
ಎಂಜಲುಕಾಸನ್ನು ಎಂದಿಗೂ ಸಹಿಸುವುದಿಲ್ಲ ಎನ್ನಿ; ಇದು ಭ್ರಷ್ಟರಿಗೆ ಸಂದೇಶವಲ್ಲ, ಅವರ ಸತಿಯರಿಗೆ.

ಡಿ.ಎಲ್. ಸುರೇಶ್, ಬಳ್ಳಾರಿ
ಗಾಂಧಿ ಸ್ಮರಣೆ ಒಂದು ದಿನಕ್ಕಷ್ಟೇ ಸೀಮಿತವಾ?




ಅಂದೂ ಕಳ್ಳಹೆಂಡ, ಕಳ್ಳಮಾಂಸವಿರುತ್ತದಲ್ಲ. ನಾವು ಒಳಿತನ್ನು ಗೌರವಿಸುವಷ್ಟು ಬೆಳೆದಿಲ್ಲ.

ಭಾರತಿ ಮಾನಗೆ, ಹೊನ್ನಾವರ
ಅತಿಯಾದ ಆತ್ಮವಿಶ್ವಾಸವೇ ಸೋಲಿಗೆ ಕಾರಣ ಎನ್ನುತ್ತಾರೆ. ಏಕೆ?
ಹತ್ತು ಅಡಿ ದೂರಕ್ಕೆ ನೆಟ್ಟ ದೃಷ್ಟಿಗೆ ಹತ್ತುವ ಪಡಿಯ ಸೊಟ್ಟು ಕಾಣದು.

ಗಡಿಯಾರದ ಸುಬ್ರಹ್ಮಣ್ಯ, ಬೆಂಗಳೂರು
ಭಿನ್ನತೆಯಲ್ಲಿ ಏಕತೆ ಎನ್ನುವ ನಮ್ಮ ದೇಶದಲ್ಲಿ ಭಾಷೆ, ನೆಲ, ಜಲಗಳ ಬಗ್ಗೆ ಸೌಹಾರ್ದತೆಯೇ ಇಲ್ಲವಲ್ಲಾ?
ಓದುವುದನ್ನು ಬದಲಿಸಿ; ಸರಿಹೋಗುತ್ತದೆ – ಭಿನ್ನತೆಯಲ್ಲಿಯೇ ಕತೆ!

ತಲಕಾಡು ಶ್ರೀನಿಧಿ, ಬೆಂಗಳೂರು
ಚರವಾಣಿಯಲ್ಲಿ ಮಾತನಾಡುವಾಗಲೆಲ್ಲ ಎದ್ದು ಓಡಾಡುತ್ತಿರುತ್ತಾರೆ. ಏಕೆ ಗುರುಗಳೆ?
ವಾಕ್ ಚಾತುರ್ಯ ಪ್ರದರ್ಶಿಸಲು!

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಪ್ಲಾಸ್ಟಿಕ್ ಬಳಕೆಯ ನಿಷೇಧಕ್ಕೆ ಜನರ ಪ್ರತಿಕ್ರಿಯೆ ಏನಿರಬಹುದು?
ಪ್ಲಾಸ್ಟಿಕ್ ಚೇರಲ್ಲಿ ಕುಳಿತು ನ್ಯಾಚೋಸ್ ತಿಂದು ಬಿಸ್ಲೇರಿ ಕುಡಿದ ಸಭಿಕರು ನಿಷೇಧಕ್ಕೆ ಜೈ ಎಂದರಂತೆ.

ನಾಜ್ಯೋತಿ, ಹೂವಿನಹಡಗಲಿ
ಅಮ್ಮನಿಗೂ ಮಮ್ಮಿಗೂ ಇರುವ ವ್ಯತ್ಯಾಸವೇನು?
ಅಮ್ಮ ಎಂದರೆ ಸಿಡುಬು; ಮಮ್ಮಿ ಎಂದರೆ ಈಜಿಪ್ಟಿನ ಶವ. ಮಮ್ಮಿಗಿಂತ ಅಮ್ಮನೇ ವಾಸಿ!

ಅಮರಯ್ಯಾ ಪತ್ರಿಮಠ, ಸುರಪುರ
ಬೆಟ್ಟದಷ್ಟು ಬಯಕೆ, ನಿರೀಕ್ಷೆ ಹೊಂದಿರುವವರಿಗೆ ನಿಮ್ಮ ಹಿತನುಡಿ?
ಪರ್ವತದಷ್ಟು ಶ್ರಮ, ಪ್ರಾಮಾಣಿಕತೆಯಿಂದ ಮುಂದುವರೆಯಿರಿ.

ರಮೇಶ್, ಹನುಮನಾಳು
ಜಗಳವಾಡುವ ಗಂಡ ಹೆಂಡತಿಗೆ ನಿಮ್ಮ ಕಿವಿಮಾತು?
ಬೈಗಳನ್ನು ರೆಕಾರ್ಡ್ ಮಾಡಿ ಸೀರಿಯಲ್‌ಗೆ ಮಾರಿ. ಬಂದ ಹಣದಲ್ಲಿ ಸಮಸ್ಯೆ ಬಗೆಹರಿಸಿಕೊಳ್ಳಿ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಅಶಿಕ್ಷಿತ ತಂದೆ ತಾಯಿಯರನ್ನು ಸುಶಿಕ್ಷಿತ ಮಕ್ಕಳು ವೃದ್ಧಾಶ್ರಮದಲ್ಲೇಕೆ ಬಿಡುವರು?
ಬೀದಿಯಲ್ಲೇ ಬಿಟ್ಟರೆ ವಾಪಸ್ ಬಂದುಬಿಡುವರೆಂಬ ಭಯ.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ
ದುಡ್ಡು ದೊಡ್ಡದೋ ಮನುಷ್ಯತ್ವ ದೊಡ್ಡದೋ?
ವಿಮಾನ ಇಳಿದು ಕ್ವಾರಂಟೈನ್‌ಗೆ ಹೋದ ಎಲ್ಲರೂ ಮನುಷ್ಯತ್ವ ದೊಡ್ಡದೆಂದು ಒಪ್ಪಿದ್ದಾರೆ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು
ವಯಸ್ಸಾದ ನಂತರ ಹೆಂಡತಿಯಿಂದ ಬೈಸಿಕೊಳ್ಳುವುದು ಹಿತವಾಗಿ ಇರುತ್ತಂತೆ ಹೌದಾ ಸರ್?
ಬಯಸಿ ಕೊಳ್ಳುವುದು ಸ್ಟಾಕ್ ಇಲ್ಲದಾಗ, ಬೈಸಿಕೊಳ್ಳುವುದರಲ್ಲೇ ತೃಪ್ತಿ ಪಡುವರಷ್ಟೆ.

ಪಿ. ಜಯವಂತ ಪೈ, ಕುಂದಾಪುರ
ನೆರೆಮನೆಗೂ ಸೆರೆಮನೆಗೂ ವ್ಯತ್ಯಾಸವೇನು?
ಇಲ್ಲಿ ಕದ್ದು ನೋಡುವವರು ಇರುತ್ತಾರೆ; ಅಲ್ಲಿ ಕದ್ದು ಓಡುವವರು ಇರುತ್ತಾರೆ.

ಎಸ್ಸೆನ್ ಮಹಾಬಲರಾವ್, ಎನ್ನಾರ್‌ಪುರ
ಪತ್ನಿಯನ್ನು ಪತಿ ಹಚ್ಚಿಕೊಳ್ಳುವುದೇಕೆ?
ವಿರಹದ ಶಾಖ ತಗ್ಗಿಸಲು ಅವಳೇ ಅತ್ಯುತ್ತಮ ಮುಲಾಮು.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಶೇ 21ರಷ್ಟು ಜನ ಬಡತನದ ರೇಖೆಗಿಂತ ಕೆಳಗಿದ್ದರೂ ಭಾರತ ಶ್ರೀಮಂತ ರಾಷ್ಟ್ರವೆಂದು ಟ್ರಂಪ್ ಹೇಳಿದ್ದಾರಲ್ಲಾ?
ವಿದೇಶಕ್ಕೆ ಹೋದವರ ಡೌಲು,



ಜಬರ್, ದೌಲತ್ತುಗಳನ್ನು ಕಂಡು ಹಾಗೆ ಅನಿಸಿದೆಯಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಪ್ರಶ್ನೆ! ಇದರ ನಿಜವಾದ ಅರ್ಥ?
ಜ್ಞಾನದಾಹ, ಅನುಮಾನ.

ಬೂಕನಕೆರೆ ವಿಜೇಂದ್ರ, ಮೈಸೂರು
ಹೆಂಗಸರ ಹತ್ತಿರ ಬೈಸಿಕೊಳ್ಳದ ಗಂಡಸರು ಯಾರಾದರೂ ಇದ್ದಾರಾ?
ಅವಿವಾಹಿತರು!

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಬದುಕಿನಲ್ಲಿ ಶುಕ್ರದೆಸೆ ಪ್ರಾರಂಭವಾಗುವುದು ಯಾವಾಗ?
ರಾಹು, ಶನಿಗಳೆಲ್ಲ ದೂರ ತೊಲಗಿದಾಗ.

ಪ್ರಶ್ನೆಗಳನ್ನು ಕಳುಹಿಸಿ:
editorsu@sudha.co.in

■ ರಾಮ್